15/11/21

# ಕರ್ನಾಟಕ ಸರ್ಕಾರ
## ಕೃಷಿ ಇಲಾಖೆ ಮತ್ತು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಮು.ಮಂ.ರೈ.ವಿ.ನಿ/ಜಂಟಿ ಸುತ್ತೋಲೆ-4/2021-22

ಬೆಂಗಳೂರು
ದಿನಾಂಕ:09/11/2021
e-mail ID : scholarship.agri2021@gmail.com

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಅಕ್ಷ ಶಾಖೆ.
32
ದಿನಾಂಕ: 11 NOV 2021

## ಜಂಟಿ ಸುತ್ತೋಲೆ

ವಿಷಯ:- ಮುಖ್ಯ ಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮಕ್ಕಾಗಿ ವಿದ್ಯಾರ್ಥಿಗಳ ನೋಂದಣಿ ಕುರಿತು.

ಉಲ್ಲೇಖ:- ಸರ್ಕಾರಿ ಆದೇಶ ಸಂ:Agri-AML/141/2021, ಬೆಂಗಳೂರು, ದಿನಾಂಕ:07/08/2021.

*****

ರಾಜ್ಯದ ರೈತರ ಮಕ್ಕಳಿಗೆ ಪ್ರೌಢಶಿಕ್ಷಣ ನಂತರದ ವಿದ್ಯಾಭ್ಯಾಸಕ್ಕಾಗಿ ಉಲ್ಲೇಖದ ಸರ್ಕಾರ ಆದೇಶದನ್ವಯ ಶಿಷ್ಯ ವೇತನ ಜಾರಿಗೆ ತರಲಾಗಿದೆ. ಸದರಿ ಕಾರ್ಯಕ್ರಮದಡಿ ರಾಜ್ಯದ ಇತರೇ ಶಿಷ್ಯ ವೇತನ ಕಾರ್ಯಕ್ರಮಗಳಡಿ ಶಿಷ್ಯ ವೇತನ ಪಡೆಯದಿರುವ ಎಲ್ಲಾ ರೈತ ಮಕ್ಕಳು ಅರ್ಹರಿರುತ್ತಾರೆ.

ಈ ಯೋಜನೆಯಡಿ ನೊಂದಾಯಿಸಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ವರ್ಗಕ್ಕೆ ಅನ್ವಯವಾಗುವಂತೆ ಶಿಷ್ಯ ವೇತನ ದರಗಳ ವಿವರ ಈ ಕೆಳಕಂಡಂತಿವೆ:

**2021-22ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ:**

| ಕ್ರ. ಸಂ. | ಕೋರ್ಸ್‌ಗಳು | ವಿದ್ಯಾರ್ಥಿಗಳು/ ಹುಡುಗರು | ವಿದ್ಯಾರ್ಥಿನಿಯರು/ ಅನ್ಯಲಿಂಗದವರು |
|---|---|---|---|
| 1 | ಪಿ.ಯು.ಸಿ / ಐ.ಟಿ.ಐ/ ಡಿಪ್ಲೊಮಾ | ರೂ.2,500/- | ರೂ.3,000/- |
| 2 | ಬಿ.ಎ./ಬಿ.ಎಸ್.ಸಿ/ಬಿ.ಕಾಂ ಇನ್ನಿತರೆ ಪದವಿ ಕೋರ್ಸ್‌ಗಳು | ರೂ.5,000/- | ರೂ.5,500/- |
| 3 | ಎಲ್.ಎಲ್.ಬಿ/ಪ್ಯಾರಾಮೆಡಿಕಲ್/ / ಬಿ.ಫಾರ್ಮ್/ನರ್ಸಿಂಗ್ ಇನ್ನಿತರೆ ವೃತ್ತಿಪರ ಕೋರ್ಸ್‌ಗಳು | ರೂ.7,500/- | ರೂ.8,000/- |
| 4 | ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ಎಲ್ಲ ಸ್ನಾತಕೋತ್ತರ | ರೂ.10,000/- | ರೂ.11,000/- |

ವಿದ್ಯಾರ್ಥಿಗಳು ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮದ ಶಿಷ್ಯ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (SSP Portal) ತಮ್ಮ ಹಾಗೂ ತಮ್ಮ ತಂದೆ ಹಾಗೂ ತಾಯಿಯ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ. ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (SSP Portal) ವಿದ್ಯಾರ್ಥಿಗಳ ದಾಖಲೆಗಳು ಪರಿಶೀಲನೆಗೊಳಪಟ್ಟ ನಂತರ ಅರ್ಹ ವಿದ್ಯಾರ್ಥಿಗಳಿಗೆ DBT ತಂತ್ರಾಂಶದ ಮುಖಾಂತರ ವಿದ್ಯಾರ್ಥಿಗಳ ಖಾತೆಗೆ ನೇರ ನಗದು ವರ್ಗಾವಣೆಯಾಗುತ್ತದೆ.

ವಿವೇ.

**ಸದರಿ ಯೋಜನೆ ಅನುಷ್ಠಾನದಲ್ಲಿ ಕಾಲೇಜು ಮುಖ್ಯಸ್ಥರು ಕೈಗೊಳ್ಳಬೇಕಾದ ಕ್ರಮಗಳು:**

1. ಯೋಜನೆ ಬಗ್ಗೆ ಎಲ್ಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು.
2. ಮುಖ್ಯ ಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮದ ಭಿತ್ತಿ ಪತ್ರವನ್ನು ಮುದ್ರಿಸಿ ಕಾಲೇಜು ಆವರಣಗಳಲ್ಲಿ ಪ್ರದರ್ಶಿಸುವುದು. (ಭಿತ್ತಿ ಪತ್ರದ ಮಾಹಿತಿಯನ್ನು ಲಗತ್ತಿಸಿದೆ.)
3. ಕಾಲೇಜಿಗೆ ಪ್ರವೇಶ ಹೊಂದುವ ಸಮಯದಲ್ಲಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಖಾತೆ ಸೃಜಿಸಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.

**ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಕ್ರಮಗಳು:**

1. 2021-22ನೇ ಸಾಲಿನ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳಬಹುದು.
2. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿಗಳ ತಂದೆ ತಾಯಿಯವರ ಆಧಾರ್ ಸಂಖ್ಯೆಯೊಂದಿಗೆ ಖಾತೆ ಸೃಜಿಸುವುದು.
3. ಎರಡನೇ ಹಂತದಲ್ಲಿ ವೈಯಕ್ತಿಕ ಮತ್ತು ಶೈಕ್ಷಣಿಕ ಮಾಹಿತಿಯನ್ನು ನಮೂದಿಸುವುದು.
   **(https://ssp.postmatric.karnataka.gov.in/2122_processing/LoginPage.aspx)**
4. ವಿದ್ಯಾರ್ಥಿಗಳ ಹೆಸರಿನಲ್ಲಿ ವೈಯುಕ್ತಿಕ ಉಳಿತಾಯ ಖಾತೆ ತೆರೆದು ಆಧಾರ್ ಸಂಖ್ಯೆಗೆ ಜೋಡಣೆ ಮಾಡಿಸಿ ಸದರಿ ಖಾತೆಗೆ NPCI Mapping ಪ್ರಕ್ರಿಯೆ ಪೂರ್ಣಗೊಳಿಸಲು ಸಂಬಂಧಪಟ್ಟ ಬ್ಯಾಂಕ್ ಗಳನ್ನು ಕೋರುವುದು (ಆಧಾರ್ ಜೋಡಣೆ ಮತ್ತು NPCI mapping ಮಾಡಲು ಕೋರಿ ಖಾತೆ ಇರುವ ಬ್ಯಾಂಕ್ ಗೆ ಮನವಿ ಅರ್ಜಿ ನೀಡುವುದು).
5. Google playstore ನಲ್ಲಿ DBT Karnataka ಅಪ್ ನ್ನು Download ಮಾಡಿ ಯಾವ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆಯಾಗಿದೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬಹುದಾಗಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಕೃಷಿ ಆಯುಕ್ತರು 19/11/21
ಕೃಷಿ ಇಲಾಖೆ




## ಅನ್ನದಾತರ ಮಕ್ಕಳ
## ಉನ್ನತ ವ್ಯಾಸಂಗಕ್ಕೆ ಉದಾತ್ತ ನೆರವು

# “ಮುಖ್ಯಮಂತ್ರಿ ರೈತ ವಿದ್ಯಾ ನಿಧಿ”

**ರಾಜ್ಯದ ರೈತಾಪಿ ಮಕ್ಕಳ ಉನ್ನತ ವ್ಯಾಸಂಗಕ್ಕೊಂದು ವರದಾನ ಈ ವಿಶಿಷ್ಟ ಕಾರ್ಯಕ್ರಮ.**




ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು ಅಧಿಕಾರ ಸ್ವೀಕರಿಸಿದ ನಂತರ ಪ್ರಥಮವಾಗಿ ನಾಡಿನ ಅನ್ನದಾತ ರೈತರು ಮತ್ತು ಸಮಾಜದ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ಕೈಗೊಂಡ ಪ್ರಧಾನ ಪಂಚ ಕಾರ್ಯಕ್ರಮಗಳ ಪೈಕಿ ಮೊದಲನೆ ಕಾರ್ಯಕ್ರಮ “ಮುಖ್ಯಮಂತ್ರಿ ರೈತ ವಿದ್ಯಾನಿಧಿ”

ಎಸ್.ಎಸ್.ಎಲ್.ಸಿ (10ನೇ ತರಗತಿ) ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತರ ಮಕ್ಕಳು ಮುಂದಿನ ವಿದ್ಯಾಭ್ಯಾಸದ ಕನಸು ಕೈಗೂಡಲು ಪ್ರತಿವರ್ಷ ಶಿಷ್ಯವೇತನ ಒದಗಿಸುವ ನೆರವಿನ ಕಾರ್ಯಕ್ರಮವಿದು. ವಾರ್ಷಿಕ ಶಿಷ್ಯವೇತನವನ್ನು ರೈತರ ಮಕ್ಕಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡಲಾಗುವುದು.

ಈ ಮಾದರಿ ಕಾರ್ಯಕ್ರಮ ಮೂಲಕ “ಅನ್ನದಾತ ಸುಖೀಭವ” ಎಂಬುದನ್ನು ಸಾಕಾರಗೊಳಿಸಿದೆ.

**ಎಲ್ಲಾ ರೈತ ಮಕ್ಕಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಕಾರ್ಯಕ್ರಮದ ಶಿಷ್ಯವೇತನಕ್ಕಾಗಿ ನೋಂದಾಯಿಸಿಕೊಳ್ಳಲು ವಿನಂತಿಸಿದೆ**

**ವಿ.ಸೂ: ಎಲ್ಲಾ ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯನ್ನು ಕಡ್ಡಾಯವಾಗಿ ತಮ್ಮ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿಸುವುದು**

### ಯೋಜನೆಯಡಿ ನೀಡಲಾಗುವ ವಾರ್ಷಿಕ ಶಿಷ್ಯ ವೇತನ

| ಕ್ರ.ಸಂ. | ಕೋರ್ಸ್‌ಗಳು | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು |
|---|---|---|---|
| 1. | ಪಿ.ಯು.ಸಿ / ಐ.ಟಿ.ಐ/ಡಿಪ್ಲೊಮಾ | ರೂ.2,500/- | ರೂ.3,000/- |
| 2. | ಬಿ.ಎ/ ಬಿ.ಎಸ್.ಸಿ/ಬಿ.ಕಾಂ ಇನ್ನಿತರೆ ಪದವಿ ಕೋರ್ಸ್‌ಗಳು | ರೂ.5,000/- | ರೂ.5,500/- |
| 3. | ಎಲ್.ಎಲ್.ಬಿ/ಪ್ಯಾರಾಮೆಡಿಕಲ್/ಬಿ.ಫಾರ್ಮ್/ ನರ್ಸಿಂಗ್ ಇನ್ನಿತರೆ ವೃತ್ತಿಪರ ಕೋರ್ಸ್‌ಗಳು | ರೂ.7,500/- | ರೂ.8,000/- |
| 4. | ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ಎಲ್ಲ ಸ್ನಾತಕೋತ್ತರ ಕೋರ್ಸ್‌ಗಳು | ರೂ.10,000/- | ರೂ.11,000/- |

ಎಸ್.ಎಸ್.ಎಲ್.ಸಿ / ಹತ್ತನೇ ತರಗತಿಯನ್ನು ಪೂರ್ಣಗೊಳಿಸಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ / ಪದವಿ / ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರು ರೈತ ಮಕ್ಕಳಿಗೆ ಶಿಷ್ಯವೇತನ.

2021-22ನೇ ಸಾಲಿನಿಂದ ಕಾರ್ಯಕ್ರಮ ಅನುಷ್ಠಾನ.



**ಹೆಚ್ಚಿನ ಮಾಹಿತಿ ಪಡೆಯಲು ರೈತ ಸಹಾಯವಾಣಿ 1800 425 3553 ಗೆ ಉಚಿತ ಕರೆಮಾಡಿ**

ಪ್ರಕಟಣೆ: ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು